ನನಗದಕ್ಕೆ ಅರ್ಹತೆ ಇಲ್ಲವೆಂದೆ. 'ಅರ್ಹತೆ ಇಲ್ಲವೆಂದು ನಮಗೂ ಗೊತ್ತು. ಆದ್ರೆ ಅರ್ಹತೆ ಅಂತ ಕಾಯ್ತಾ ಕೂತ್ರೆ ಕೆಲ್ಸ ಆಗ್ಬೇಕಲ್ಲಾ. ಆಗ್ಲೇ ಹೊತ್ತಾಗಿದೆ ಮೇಲಕ್ಕೇಳಿ' ಎಂದು ಸತ್ಯವನ್ನೇ ನುಡಿದು ಮೇಲಕ್ಕೆಬ್ಬಿಸಿದರು. ಹೇಳಿಕೇಳಿ ಶಾಲೆ. ನೂರೈವತ್ತಕ್ಕೂ ಹೆಚ್ಚಿನ ಮಕ್ಕಳು ಬಹುಮಾನ ಸ್ವೀಕರಿಸಲು ಸಾಲಿನಲ್ಲಿ ನಿಂತಿದ್ದರು. ನಿಂತು ಬಹುಮಾನ ಕೊಟ್ಟೂ ಕೊಟ್ಟೂ ಕಾಲು ನೋಯುತ್ತಿತ್ತು. ನೂರೈವತ್ತು ಬಾರಿ ಕ್ಯಾಮರಾ ಮುಂದೆ ಹಲ್ಲುಕಿರಿದೂ ಕಿರಿದೂ ಬಾಯಿಯೂ ನೋಯುತ್ತಿತ್ತು. ಕೊನೆಗೂ ಅದು ಕೊನೆಗೊಂಡು ವೇದಿಕೆಯಿಂದ ಇಳಿದು ಬಂದಾಗಲೇ ಆ ಯುವತಿ ಎದುರಾಗಿದ್ದು. ಉಟ್ಟಿದ್ದು ಪಟ್ಟೆಪಟ್ಟೆ ಲಂಗಾದಾವಣಿ. ಉದ್ದ ಜಡೆ ಅದನ್ನು ಸುತ್ತಿದ್ದ ಉದ್ದದ ಕನಕಾಂಬರ ಮಾಲೆ. ಮುಖದಲ್ಲಿ ಮುಗ್ಧ ನಗೆ.

'ಆಟೋಗ್ರಾಫ್ ಮೇಡಂ' ಎಕ್ಸರ್ಸೈಸ್ ಪುಸ್ತಕ ಮುಂದೊಡ್ಡಿದಳು. ರೋಮಾಂಚನವಾಯಿತು. ನಾನು ಆಟೋಗ್ರಾಫ್ ಕೊಡುವುದೇ? ಸಾಧನೆ, ಕಠಿಣ ಶ್ರಮ, ಕೀರ್ತಿ ಯಾವುದೂ ಇಲ್ಲದೆ?

'ಮೇಡಂ, ನಿಮ್ಮ ಕವಿತೆಗಳೆಲ್ಲಾ ಓದಿದ್ದೀನಿ. ನಮ್ಮ ನಾಡಿನ ಖ್ಯಾತ ಕವಯಿತ್ರಿಯರಲ್ಲಿ ನೀವೊಬ್ಬರು' ಎಂದುಬಿಟ್ಟಳು! ನೀವೆ ಹೇಳಿ, ಹೀಗ್ಯಾರಾದರೂ ಹೇಳಿದ್ರೆ ನಿಮ್ಮ ಪರಿಸ್ಥಿತಿ ಹೇಗಿರಬೇಡ! ನೆನಪಿನಾಳಕ್ಕಿಳಿದೆ. ಆಗಿನ್ನೂ ಹದಿಹರೆಯ. ಪ್ರೇಮದ ಗುಂಗಿನಲ್ಲೇ ಕಳೆಯುವ ಕನಸಿನ ದಿನಗಳು. ಆ ಗುಂಗಿನಲ್ಲಿ ಮನೆಗೆ ಪೇಪರ್ ಹಾಕುವ ಹುಡುಗ ಸ್ವಲ್ಪದಿನ ಪ್ರಿಯಕರನಾಗಿದ್ದ! ಆ ಸಂದರ್ಭದಲ್ಲಿ ಅನೇಕ ಕವನಗಳನ್ನು ರಹಸ್ಯವಾಗಿ ಬರೆದಿದ್ದೆ. ಕಡೆಯ ಎರಡು ಸಾಲಿನ ಅಕ್ಷರಗಳ ನಡುವೆ ಚಮತ್ಕಾರಿಕವಾಗಿ ನನ್ನ ಹೆಸರನ್ನೂ ತೂರಿಸಿ ಅಂಕಿತ ಎಂದು ಖುಷಿ ಪಟ್ಟಿದ್ದೆ. ಮದುವೆಯ ನಂತರ ಆ ಪುಸ್ತಕವೂ ನನ್ನೊಡನೆ ಗಂಡನ ಮನೆಗೆ ಬಂದಿತ್ತು. ಒಮ್ಮೆ ನನ್ನ ಗಂಡ ಮನೆ ಕ್ಲೀನ್ ಮಾಡುವಾಗ ಹಳೆ ಪುಸ್ತಕಗಳನ್ನೆಲ್ಲಾ ರದ್ದಿ ಅಂಗಡಿಗೆ ಹಾಕಿದ್ದರು. ಅಕಸ್ಮಾತ್ ನನ್ನ ಆ ಪುಸ್ತಕ ಪಕೋಡಾ ವ್ಯಾಪಾರಿಗೆ ಸಿಕ್ಕಿ, ಈ ಹುಡುಗಿ ಅಲ್ಲಿ ಪಕೋಡಾ ತಿಂದು ಕೈವರೆಸುವಾಗ ಆ ಹಾಳೆಗಳು ಅವಳಿಗೆ ಸಿಕ್ಕಿ, ಅವಳು ಅದನ್ನು ಓದಿ ಅಲ್ಲಿದ್ದ ಅಂಕಿತ ಗುರ್ತಿಸಿ ಇಲ್ಲಿಗೆ ಬಂದು ನನ್ನ ಆಟೋಗ್ರಾಫ್ ಕೇಳಿರಬಹುದೇ? ಅಸಾಧ್ಯವಾದ ಸಾಧ್ಯತೆಗಳು ಎನಿಸಿದರೂ ಸಿಕ್ಕ ಅವಕಾಶಗಳನ್ನು ಬಿಡುವುದುಂಟೇ? ಉದ್ವೇಗದಿಂದ ನಡುಗುವ ಕೈಗಳಿಂದ ಆದಷ್ಟು ಗುಂಡಾಗಿ ಹೆಸರು ಬರೆದು ನನ್ನ ಆಸನದಲ್ಲಿ ಕುಳಿತೆ. ವಂದನಾರ್ಪಣೆ ಚಾಲ್ತಿಯಲ್ಲಿತ್ತು. ನನ್ನ ಪಕ್ಕದಲ್ಲಿದ್ದ ಮಹಿಳೆ ಅದ್ಯಾಕೋ ಕುಲುಕುಲು ನಗುತ್ತಿದ್ದಳು! ನನ್ನತ್ತ ಬಾಗಿದಳು.

'ಆ ಹುಡುಗಿ ನಿಮ್ಮನ್ನು ಆಟೋಗ್ರಾಫ್ ಕೇಳಿದ್ಲಾ?' ನಾನು ತಲೆಯಾಡಿಸಿದೆ.

'ಅವ್ಳು ನಮ್ಮೂರ ಪುರೋಹಿತರ ಮಗ್ಳು. ಸ್ವಲ್ಪವೂ ಬುದ್ಧಿ ಸರಿ ಇಲ್ಲ. ಕಂಡಕಂಡವರ ಬಳಿಹೋಗಿ ಆಟೋಗ್ರಾಫ್ ಕೇಳ್ತಾಳೆ. ಆಮೇಲೆ ಆ ಪುಟ ಹರಿದು ಬಿಸಾಕ್ತಾಳೆ.' ವೇದಿಕೆಯ ಮೇಲೆ ಯಾರೋ ಮಂಗಳ ಹಾಡುತ್ತಿದ್ದಂತೆ ಈಕೆ ನನ್ನ ಮುಖಕ್ಕೆ ಮಂಗಳಾರತಿ ಎತ್ತಿದ್ದಳು!

## ಕುಮುದಾ ಪುರುಷೋತ್ತಮ್

ಹುಟ್ಟೂರು ಬೆಂಗಳೂರು. ಸ್ನಾತಕೋತ್ತರ ಪದವಿಧರೆ. ಮದುವೆಯ ಬಳಿಕ ಪಶ್ಚಿಮ ಬಂಗಾಲದ ಖಡ್ಗಪುರ ಹಾಗೂ ಚೆನ್ನೈಯಲ್ಲಿ ವಾಸ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇನ್ನೂರಕ್ಕೂ ಮೇಲ್ಪಟ್ಟು ಹಾಸ್ಯ ಲೇಖನಗಳು ಮತ್ತು ಸಣ್ಣ ಕತೆಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಮೂರು ಕಥಾ ಸಂಗ್ರಹ, ಮೂರು ಹಾಸ್ಯ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಆಕಾಶವಾಣಿಯಲ್ಲಿ ನಾಟಕಗಳು, ಗೀತ ರೂಪಕಗಳು ಪ್ರಸಾರಗೊಂಡಿವೆ.